International Journal of Kannada Research
www.kannadajournal.com

ISSN: 2454–5813
IJKR 2018; 4(1): 26-28
© 2018 IJKR
www.kannadajournal.com
Received: 08-11-2017
Accepted: 09-12-2017

**ನೇಮಿನಾಥ ತಪಕೀರೆ**
ಸಂಶೋಧನ ವಿದ್ಯಾರ್ಥಿ,
ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

**Correspondence**
**ನೇಮಿನಾಥ ತಪಕೀರೆ**
ಸಂಶೋಧನ ವಿದ್ಯಾರ್ಥಿ,
ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

# ಜೈನ ಧರ್ಮದಲ್ಲಿ ಶ್ರಾವಕಾಚಾರಗಳು

**ನೇಮಿನಾಥ ತಪಕೀರೆ**

ಭಾರತೀಯ ಧರ್ಮ–ಸಂಸ್ಕೃತಿಯ ಮೂಲದಲ್ಲಿ ಆಳವಾಗಿ ಬೇರೂರಿರುವ ಜೈನಧರ್ಮದ ಚಿಂತನೆಗಳನ್ನು, ತತ್ತ್ವಗಳನ್ನು, ಬೋಧನೆಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಾಗ ಜೈನಧರ್ಮದ ವಿವೇಚನಾಯುಕ್ತ ಪರಿಭಾಷೆಗಳು ಧಾರ್ಮಿಕವಾಗಿಯೂ ಲೌಕಿಕವಾಗಿಯೂ ತಮ್ಮ ಮೇರೆಯನ್ನು ಮೀರಿ ನಿಲ್ಲುತ್ತವೆ. ತಾತ್ತ್ವಿಕ ಸತ್ವವನ್ನು ತುಂಬಿಕೊಂಡಿರುವ ಜೈನ ಸಾಹಿತ್ಯವು ಪ್ರಾತಿನಿಧಿಕವಾಗಿ ನಿಲ್ಲುತ್ತದೆ. ಜಿನಧರ್ಮವು ಸ್ಥಾಪನೆಯಾದದ್ದು 'ಶ್ರಮಣ ಸಂಸ್ಕೃತಿ' ಮತ್ತು 'ಶ್ರಾವಕ ಸಂಸ್ಕೃತಿ'ಗಳ ಅನೀಶ್ವರವಾದದ ಹಿನ್ನೆಲೆಯಲ್ಲಿ. ಇಲ್ಲಿ ವೀತರಾಗತ್ವವೇ ಪರಮೋಚ್ಚವಾದುದ್ದು[1]. ಉದ್ದೀಪಿತ ಭೋಗತ್ವದ ಪರಮೋಚ್ಚಮಟ್ಟದಲ್ಲಿರುವಾಗಲೇ ವಿರಾಗತ್ವದ ಅನಾವರಣ ಜೈನಕಾವ್ಯಗಳ ವೈಶಿಷ್ಟ್ಯವಾಗಿದೆ. 'ಆದಿಪುರಾಣದ ನೀಲಾಂಜನೆಯ ನೃತ್ಯ' ಪ್ರಸಂಗ, 'ಯಶೋಧರ ಚರಿತೆಯ ಅಷ್ಟಾವಂಕ ಅಮೃತಮತಿಯ' ಪ್ರಸಂಗ 'ಅಜಿತಪುರಾಣದ ಚಂಡಶಾಸನ' ಇದಕ್ಕೆ ಉತ್ತಮ ನಿದರ್ಶನಗಳು.

ಸಮಂತಭದ್ರ, ಕುಂದಕುಂದಾಚಾರ್ಯ, ಜಿನಸೇನ, ಗುಣಭದ್ರಾಚಾರ್ಯರಂತಹ ಅಪೂರ್ವ ಆಚಾರ್ಯ ಪರಂಪರೆಯನ್ನು ಜಿನಧರ್ಮದಲ್ಲಿ ಕಾಣುತ್ತೇವೆ. ಇದನ್ನೇ ಶ್ರಮಣ ಪರಂಪರೆ ಎಂತಲೂ ಕರೆಯಲಾಗುತ್ತದೆ[2]. ಹೀಗೆ ತೀರ್ಥಂಕರನ ಅನುಯಾಯಿಗಳಾಗಿ ಜಿನತ್ವವನ್ನು ಸಾಧಿಸಲು ಮುನ್ನಡೆದು ಆಸ್ತಿ–ಪಾಸ್ತಿ, ಮನೆ–ಮಠ, ಬಂಧು ಸಂಬಂಧಗಳನ್ನು ಕಳಚಿಕೊಂಡು ದೀಕ್ಷಿತರಾಗಿ ವೈರಾಗ್ಯ ಸಾಧನೆಗೆ ತೊಡಗಿದ ಮುನಿಗಳು ಒಂದುಕಡೆ. ಜಿನತ್ವದ ತತ್ತ್ವಗಳನ್ನು ಪಾಲಿಸಿಕೊಂಡು ಜೈನಧರ್ಮದ ಪರಿಪಾಲನೆ ಮಾಡುತ್ತ ಯಾವುದೇ ಸಂಬಂಧ, ಆಸ್ತಿ–ಪಾಸ್ತಿ, ಆಸೆ–ಆಕಾಂಕ್ಷೆಗಳನ್ನು ತೊರೆಯದೇ ಕೌಟುಂಬಿಕ ಜೀವನ ನಡೆಸುವವರು ಇನ್ನೊಂದುಕಡೆ. ಹೀಗಾಗಿ ತಾತ್ತ್ವಿಕ ಅಂಶಗಳನ್ನೊಳಗೊಂಡ ಜೈನಧರ್ಮದ ಅನುಯಾಯಿಗಳನ್ನು 'ಮುನಿಗಳು' ಹಾಗೂ 'ಶ್ರಾವಕರು' ಎಂದು ಭಿನ್ನವಾಗಿಸಲಾಯಿತು. ಅದರ ತತ್ತ್ವ ಪರಿಪಾಲನೆಯ ಆಯಕಟ್ಟಿನಲ್ಲಿ 'ಮುನಿಧರ್ಮ' ಹಾಗೂ 'ಶ್ರಾವಕ ಧರ್ಮ'ಗಳೆಂದು ವಿಭಜನೆಯಾದವು[3]. ಈ ಅಂಶಗಳ ಹಿನ್ನೆಲೆಯಲ್ಲಿ ನೋಡಿದಾಗ ಅನೀಶ್ವರತ್ವದ ನೆಲೆಯಲ್ಲಿರುವ ಜೈನಧರ್ಮವು ಕರ್ಮಸಿದ್ಧಾಂತದ ಮೂಲದಲ್ಲಿ ಭದ್ರವಾಗಿರುವುದು. ಆದರೆ ಎಲ್ಲೋ ಒಂದು ಕಡೆಗೆ ಈಶ್ವರತ್ವವನ್ನು ಒಪ್ಪುವ ಅಂಶ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿರುವುದು ಕಾಣಬರುತ್ತದೆ. ಅದಕ್ಕಾಗಿಯೇ 'ಶ್ರಮಣ ಆಚಾರ'ಗಳು ಮತ್ತು 'ಶ್ರಾವಕಾಚಾರ'ಗಳು ಎಂಬ ಭಿನ್ನತೆಗಳನ್ನು ಜಿನಧರ್ಮವು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು[4].

ಹೀಗೆ ವ್ರತನಿಷ್ಠನಾದ ಗೃಹಸ್ಥನನ್ನು 'ಶ್ರಾವಕ'[5] ಎಂದೂ ಶ್ರಾವಕರು ಆಚರಿಸಬೇಕಾದ ಧರ್ಮಾಚರಣೆಗಳು 'ಶ್ರಾವಕಾಚಾರ'ಗಳೆಂದೆನಿಸಿಕೊಂಡಿವೆ. ಶ್ರದ್ಧಾಪೂರ್ವಕವಾಗಿ ಗುರು ಮೊದಲಾದವರಲ್ಲಿ ಧರ್ಮಶ್ರವಣ ಮಾಡುವವನು ಶ್ರಾವಕ. ಪಾಕ್ಷಿಕ ಶ್ರಾವಕ, ನೈಷ್ಠಿಕ ಮತ್ತು ಸಾಧಕ ಶ್ರಾವಕರೆಂದು ಶ್ರಾವಕರಲ್ಲಿ ಮೂರು ಭೇದಗಳನ್ನು ಮಾಡಲಾಗಿದೆ.

ಅಸಿ, ಮಸಿ, ಕೃಷಿ ಹಾಗೂ ವಾಣಿಜ್ಯ ಕರ್ಮಗಳಿಂದ ಕೆಲವು ಸಲ ಗೃಹಸ್ಥನಿಂದ ಹಿಂಸೆಯುಂಟಾಗುತ್ತದೆ. ಆದರೂ ಸಹ ಅವುಗಳಿಂದುಂಟಾಗುವ ದೋಷಗಳನ್ನು ಪಕ್ಷ, ಚರ್ಯೆ ಮತ್ತು ಸಾಧಕತ್ವಗಳಿಂದ ಪರಿಹರಿಸಿಕೊಳ್ಳಬಹುದಾಗಿದೆ. ನಿತ್ಯ ಅಹಿಂಸಾರೂಪದಿಂದ ಕೂಡಿರುವುದು ಪಕ್ಷ[6]. ಯಾವನು ಜೈನಧರ್ಮದ ಪಕ್ಷವಾಗಿರುತ್ತಾನೋ ಅವನು ಪಾಕ್ಷಿಕ ಶ್ರಾವಕ.[7] ಇವನು ಸಂಕಲ್ಪ ಪೂರಕವಾಗಿ ತ್ರಸ ಹಿಂಸೆಯನ್ನು ತ್ಯಾಗ ಮಾಡುವೆನೆಂದು ಪ್ರತಿಜ್ಞೆ ಮಾಡಿದವನು ಪಾಕ್ಷಿಕ ಶ್ರಾವಕನಾಗುತ್ತಾನೆ. ಇವನು ಹಿಂಸೆಯನ್ನು ತೊರೆಯಲು ಮೊದಲು ಮದ್ಯ, ಮಾಂಸ, ಮಧು ಮತ್ತು ಪಂಚ ಔದುಂಬರ ಫಲಗಳನ್ನು ಬಿಡಬೇಕು.[8]

ಶ್ರಾವಕಾಚಾರವು ರತ್ನತ್ರಯಗಳಾದ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ್ಯಗಳ ಮೇಲೆ ನಿಂತಿದೆ. ಜೈನಧರ್ಮವು ಶ್ರಾವಕನಿಂದ ದೇವಪೂಜೆ, ಗುರೂಪಾಸನೆ, ಸ್ವಾಧ್ಯಾಯ ಮತ್ತು ಸಂಯಗಳೆಂಬ ಕರ್ತವ್ಯಗಳನ್ನು ನಿರೀಕ್ಷಿಸುತ್ತದೆ. ಶ್ರಾವಕಾಚಾಗಳನ್ನು ಆತನನ್ನು ಈ ನಿಟ್ಟಿನಲ್ಲಿ ಪುಷ್ಠಿಗೊಳಿಸುತ್ತವೆ. ಅಹಿಂಸೆಯೇ ಜೈನ ಧರ್ಮದ ಜೀವಾಳ. ಆದುದರಿಂದ ಶ್ರಾವಕಾಚಾರಗಳು ಅಹಿಂಸೆಯನ್ನು ಹೆಜ್ಜೆ ಹೆಜ್ಜೆಗೂ ಪ್ರತಿಪಾದಿಸುತ್ತವೆ. ಹೀಗಾಗಿ ಶ್ರಾವಕರು ಆಹಾರಕ್ರಮದಲ್ಲಿ ಬಹಳ ಕಟ್ಟುನಿಟ್ಟಾಗಿರಬೇಕಾಗುತ್ತದೆ. ಅಡುಗೆಗಾಗಿ ಬಳಸುವ ಹಿಟ್ಟನ್ನು ಬೇಸಿಗೆಯಲ್ಲಿ ಏಳು ದಿನ, ಮಳೆಗಾಲದಲ್ಲಿ ಐದು ದಿನ ಮತ್ತು ಚಳಿಗಾಲದಲ್ಲಿ ಕೇವಲ ಮೂರು ದಿನ ಮಾತ್ರ ಬಳಸಬೇಕೆಂಬುದು ನಿಯಮ.[9] ಇಲ್ಲವಾದಲ್ಲಿ ತ್ರಸಜೀವಿಗಳು[10] ಉತ್ಪತ್ತಿಯಾಗಿ ಅವುಗಳಿಗೆ ಹಿಂಸೆಯಾಗುತ್ತದೆ. ಮನ, ವಚನ, ಕಾಯಗಳಿಂದ ಕೊಲೆ, ಕಳುವು ಮುಂತಾದ ಪಾತಕಗಳನ್ನು ಮಾಡಬಾರದೆಂಬುದು ಶ್ರಾವಕಾಚಾರದ ನಿಯಮ.

> ಎಸಗಿ ಮಸಗಿ ಪರಿವ ಪಾರುವ ಪ್ರಾಣಿಗಳಂ ದೇವತೆ
> ಕಾರಣಮಾಗಿಯುಂ ನಂಟರ್ಕಾರಣಮಾಗಿಯುಂ
> ಪಿತರ್ಕಾರಣಮಾಗಿಯುಂ ವಿನೋದಕಾರಣಮಾಗಿಯುಂ
> ಮನೋವಚನ ಕಾಯಗಳಿಂದಂ ಕೊಲ್ಲದುದುಂ
> ಕೊಲಿಸದುದುಂ ಕೊಲೆಗೊಡಂಬಡುದು[11]

ಶ್ರಾವಕನಲ್ಲಿ ಜ್ಞಾನ, ಪೂಜೆ (ಪ್ರತಿಷ್ಠೆ), ಕುಲ, ಜಾತಿ, ಬಲ, ಋದ್ಧಿ[12], ತಪ, ರೂಪಗಳೆಂಬ ಅಷ್ಟಮದಗಳು ಹಾಗೂ ಲೋಕ ಮೂಢತೆ, ದೇವ ಮೂಢತೆ, ಪಾಖಂಡಿ[13] ಮೂಢತೆಗಳೆಂಬ ತ್ರೈಮೂಢತೆಗಳು ಇರಕೂಡದು. ಈ ಮೂರು
ಮೂಢತೆಗಳು ಇಲ್ಲದಿರುವುದೇ ಸಮ್ಯಗ್ದೃಷ್ಟಿ. ಶ್ರಾವಕನು ನಿಃಶಂಕೆ, ನಿಃಕಾಂಕ್ಷೆ, ನಿರ್ವಿಚಿಕಿತ್ಸೆ,[14] ಅಮೂಢದೃಷ್ಟಿ, ಉಪಗೂಹನ,[15] ಸ್ಥಿತೀಕರಣ, ವಾತ್ಸಲ್ಯ ಮತ್ತು ಧರ್ಮಪ್ರಭಾವನಗಳೆಂಬ ಅಷ್ಟಗುಣಗಳಾದ ಸಮ್ಯಗ್ದರ್ಶನಗಳಿಂದ ಆರೂಢಿತನಾಗಿರಬೇಕು. ಹದಿನೆಂಟು ದೋಷಗಳಿಂದ[16] ಮುಕ್ತನಾಗಿರಬೇಕು.
ಮಿಥ್ಯಾತ್ವಗಳಿಂದ ಮುಕ್ತನಾಗಿರಬೇಕು. ಅದರಲ್ಲಿ ಮೊದಲನೆಯದು ಮದ. ನಾನೇ ಬಹುಶ್ರುತ ಎಂದು ಕೊಳ್ಳುವುದು ಜ್ಞಾನಮದ. ನನಗೆ ಸಮನಾದ ಪೂಜ್ಯರಿಲ್ಲ ಎಂಬುದು ಪೂಜಾಮದ. ನನ್ನಂಥ ಕುಲಜರಿಲ್ಲ ಎಂಬುದು ಕುಲಮದ. ನಾನೇ ಶುದ್ಧಜಾತಿ ಎಂಬುದು ಜಾತಿಮದ. ನಾನೇ ವೀರ್ಯವಂತ ಎಂಬುದು ಸತ್ವಮದ. ನನಗಿಂತ ಸಿರಿವಂರಿಲ್ಲ ಎಂಬುದು ಸಿರಿಮದ. ನನಗಿಂತ ಚೆಲುವರಿಲ್ಲ ಎಂಬುದು ರೂಪಮದ. ಇವುಗಳನ್ನೆಲ್ಲ ವಿನಯವೆಂಬ ಜಲವರ್ಷದಿಂದ ಗೆಲ್ಲಬೇಕು. ಸಮ್ಯಕ್‌ದರ್ಶನ ಶುದ್ಧನಾದ ಮನುಷ್ಯನು ದೇವನೆನಿಸಿಕೊಳ್ಳುತ್ತಾನೆ. ಸಮ್ಯಕ್ತ್ವವಿಲ್ಲದ ಮುನಿಗಿಂತ ಸಮ್ಯಕ್ತ್ವ ಹೊಂದಿರುವ ಸಾಮಾನ್ಯ ಗೃಹಸ್ಥ ಶ್ರೇಷ್ಠನೆನಿಸಿಕೊಳ್ಳುತ್ತಾನೆ. ಸಮ್ಯಕ್‌ದರ್ಶನದಿಂದ ಮಾನವನು ಸ್ವರ್ಗಸುಖವನ್ನು ಅನುಭವಿಸುತ್ತಾನೆ. ಮುಂದೆ ಭೂಮಿಯಲ್ಲಿ ಹುಟ್ಟಿ, ಚಕ್ರವರ್ತಿಯಾಗಿ ಸಾಮ್ರಾಜ್ಯ ಸುಖವನ್ನು ಅನುಭವಿಸಿ ತೀರ್ಥಂಕರನಾಗಿ ಧರ್ಮಚಕ್ರವನ್ನು ಗಳಿಸುತ್ತಾನೆ.[17] ವಸ್ತುವಿನ ಯಥಾವತ್ ಸ್ವರೂಪವನ್ನು ತಿಳಿಸುವುದು ಸಮ್ಯಕ್‌ಜ್ಞಾನ. ಇದರಲ್ಲಿ ಮತಿಜ್ಞಾನ,[18] ಶ್ರುತಜ್ಞಾನ,[19] ಅವಧಿಜ್ಞಾನ,[20] ಮನಃಪರ್ಯಾಯ ಜ್ಞಾನ,[21] ಕೇವಲ ಜ್ಞಾನ[22] ಗಳೆಂದು ಐದು ಬಗೆಗಳು. ಶ್ರುತಜ್ಞಾನದಲ್ಲಿ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ ಮತ್ತು ದ್ರವ್ಯಾನುಯೋಗ ಎಂದು ನಾಲ್ಕು ವಿಧಗಳು. ಪುರುಷಾರ್ಥಗಳ ಮಹತ್ವ ತಿಳಿಸುವುದು ಪ್ರಥಮಾನುಯೋಗ. ಚತುರ್ಗತಿ,[23] ಲೋಕ ಅಲೋಕಗಳ ಭೇದವನ್ನು ತಿಳಿಸುವುದು ಕರಣಾನುಯೋಗ. ಆಚಾರ್ಯರು ಮತ್ತು ಶ್ರಾವಕರ ಆಚರಣೆಗಳನ್ನು ತಿಳಿಸುವುದು ಚರಣಾನುಯೋಗ. ಸಕಲ ಪ್ರಾಣಿಗಳಿಗೂ ಹಿತವಾದ ಏಳು ತತ್ತ್ವಗಳನ್ನು[24] ತಿಳಿಸುವುದು ದ್ರವ್ಯಾನುಯೋಗ.
ಪಂಚ ಮಹಾಪಾತಕಗಳನ್ನು ನಾಶಪಡಿಸುವುದೇ ಸಮ್ಯಕ್‌ಚಾರಿತ್ರ್ಯ ಎನಿಸಿದೆ. ಇದರಲ್ಲಿ ವಿಕಲ ಮತ್ತು ಸಕಲ ಎಂದು ಎರಡು ಪ್ರಕಾರಗಳಿವೆ. ವಿಕಲ ಚಾರಿತ್ರ್ಯದಲ್ಲಿ ಮೂರು ವಿಧಗಳು. ಅಣುವ್ರತ, ಗುಣವ್ರತ ಮತ್ತು ಶಿಕ್ಷಾವ್ರತ. ಅಣುವ್ರತ ಎಂದರೆ ಕೊಲೆ, ಸುಳ್ಳು, ಕಳವು, ಕಾಮ, ಮೂರ್ಛೆ ಎಂಬ ಮಹಾಪಾತಕಗಳಿಂದ ಮುಕ್ತನಾಗುವುದೇ ಅಣುವ್ರತ. ಅಂತೆಯೇ ಅಹಿಂಸೆ, ಸತ್ಯ, ಅಚೌರ್ಯ, ಅಪರಿಗ್ರಹ, ಬ್ರಹ್ಮಚರ್ಯಗಳು ಪಂಚಾಣುವ್ರತಗಳು ಎನಿಸಿವೆ.

> ಗುಣವ್ರತಗಳು ಮೂರು : ದಿಗ್ವಿರತಿ,[25] ದೇಶವಿರತಿ, ಅನರ್ಥದಂಡವಿರತಿ.[26]

ಶಿಕ್ಷಾವ್ರತಗಳು ನಾಲ್ಕು : ಭೋಗೋಪಭೋಗ ಪರಿಮಾಣ, ದೇಶಾವಕಾಶಿಕ, ಸಾಮಾಯಿಕ,[27] ಪ್ರೋಷಧೋಪವಾಸ,[28] ವೈಯಾಪೃತ್ಯ.[29] ಇವುಗಳನ್ನು ಪಾಲಿಸುವವರು ರಾತ್ರಿ ಊಟ ಮಾಡಕೂಡದು. ಗೆಡ್ಡೆ, ಕಂದಮೂಲಗಳನ್ನು ಸೇವಿಸಬಾರದು. ಸಾಮಾಯಿಕ ಪ್ರೋಷಧ, ಅತಿಥಿ ಪೂಜೆ, ಸಲ್ಲೇಖನಗಳು ಇದರಲ್ಲಿಯೇ ಬರುತ್ತವೆ. ಬಸದಿ, ಕ್ಷೇತ್ರಶುದ್ಧಿಯುಳ್ಳ ಪ್ರದೇಶದಲ್ಲಿ ವಿಷಯ, ಕಷಾಯಗಳಿಂದ ಅಗಲಿ ಮೌನದಿಂದ ತ್ರಿಭುವನ ಸ್ವಾಮಿಯಾದ ಜಿನೇಶ್ವರನನ್ನು ತ್ರಿಕರಣ ಶುದ್ಧದಿಂದ ಪಂಚೇಂದ್ರಿಯಗಳನ್ನು ಹರಿಯಲು ಬಿಡದೇ ಅನ್ನ, ಪಾನ, ಖಾದ್ಯ ಲೇಹ್ಯ ಎಂಬ ಚತುರ್ಥ ವಿಧದ ಆಹಾರವನ್ನು ಅಷ್ಟಮಿ ಮೊದಲಾದ ಪರ್ವದಿನಗಳಂದು ತೊರೆಯುವುದು ಪ್ರೋಷಧೋಪವಾಸ.
ಸಕಲ ಪರಿಗ್ರಹಗಳನ್ನು ತ್ಯಜಿಸಿತಪವನ್ನು ಸ್ವೀಕರಿಸುವುದೇ ಸಲ್ಲೇಖನ.[30] ಕಾಯ ಮತ್ತು ಕಷಾಯಗಳನ್ನು ಕೃಶಗೊಳಿಸುವುದು.[31] ಇದರಲ್ಲಿ ಎರಡು ಪ್ರಕಾರಗಳುಂಟು. ಒಂದು ಬಾಹ್ಯ. ಎರಡನೆಯದ್ದು ಅಭ್ಯಂತರ. ಬಾಹ್ಯ ಸಲ್ಲೇಖನವು ಶರೀರಕ್ಕೆ ಸಂಬಂಧಿಸಿದ್ದು. ಅಭ್ಯಂತರ ಸಲ್ಲೇಖನವು ಕಷಾಯಗಳಿಗೆ ಸಂಬಂಧಿಸಿದ್ದು. ತನ್ನ ಜೀವಿತಾವಧಿವರೆಗೆ ಮಾಡಿದ ಪಾಪಕರ್ಮಗಳನ್ನು ಗುರುಗಳ ಮುಂದೆ ಅರುಹಬೇಕು. ನಂತರ ಪರಿಗ್ರಹಗಳನ್ನು ಬಿಟ್ಟು ಕ್ರಮೇಣ ಆಹಾರ ಕಡಿಮೆ ಮಾಡುತ್ತ, ನೀರನ್ನೂ ಕುಡಿಯದೆ, ಪಂಚ ನಮಸ್ಕಾರ ಮಾಡುತ್ತ ಶರೀರ ತ್ಯಾಗ ಮಾಡಬೇಕು. ಸಲ್ಲೇಖನ ವ್ರತದಿಂದ ಪೂಜೆ, ಅರ್ಥ, ಐಶ್ವರ್ಯಗಳು ವೃದ್ಧಿಯಾಗುತ್ತವೆ. ಹೀಗೆ ಜಿನಧರ್ಮಾನುಸಾರಿಯಾದ ಶ್ರಾವಕನು ತಾನು ಅನುಸರಿಸಬೇಕಾದ ಆಚರಣೆಗಳನ್ನು ರತ್ನಕರಂಡಕ ಶ್ರಾವಕಾಚಾರದಲ್ಲಿ ತಿಳಿಸಲಾಗಿದೆ.

## ಉಲ್ಲೇಖಗಳು


1. ಜೈನಧರ್ಮ (ಪು. ಸಂ. 438) : ಮಿರ್ಜಿ ಅಣ್ಣಾರಾಯ
2. ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು : ಸಂ. ವೈ. ಸಿ ಭಾನುಮತಿ
3. 'ಸವಣಸುತ್ತಂ' ಜೈನಧರ್ಮದ ಪ್ರಾತಿನಿಧಿಕ ಗ್ರಂಥ (ಧರ್ಮ ಪರಿಚಯ – ಪು. ಸಂ. ಥಥ) : ಸಂ–ಅನು. ಡಾ. ಎಂ. ಎ. ಜಯಚಂದ್ರ.
4. ರತ್ನಕರಂಡಕದ ಕಥೆಗಳು : ಸಂ. ಬಿ. ವ್ಹಿ. ಶಿರೂರ
5. ಜೈನ ಪಾರಿಭಾಷಿಕ ಪದವಿವರ ಕೋಶ (ಪು. ಸಂ. 286) : ಡಾ. ಸರಸ್ವತಿ ವಿಜಯಕುಮಾರ್ & ಬಾ. ವೇ. ಶ್ರೀಧರ.
6. ಜೈನ ಪಾರಿಭಾಷಿಕ ಪದವಿವರ ಕೋಶ (ಪು. ಸಂ. 286) :

ಡಾ. ಸರಸ್ವತಿ ವಿಜಯಕುಮಾರ್ & ಬಾ. ವೇ. ಶ್ರೀಧರ.

7. ಜೈನಧರ್ಮ ತಿಳಿಯಿರಿ : (ಪು. ಸಂ. 189) : ರತನಚಂದ ಕೋಟಿ
8. ಹಾಲುಬರುವ ಮರಗಳು – ಅತ್ತಿ, ಆಲ, ಗೋಣಿ, ಬಸರಿ, ಅರಳಿ
9. ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು : ವೈ. ಸಿ. ಭಾನುಮತಿ
10. ಜೈನ ಪಾರಿಭಾಷಿಕ ಪದವಿವರ ಕೋಶ (ಪು. ಸಂ. 286) : ಡಾ. ಸರಸ್ವತಿ ವಿಜಯಕುಮಾರ್ & ಬಾ. ವೇ. ಶ್ರೀಧರ.
    ತ್ರಸಜೀವಿಗಳು = ಏಕೇಂದ್ರೀಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಹಾಗೂ ಅಸಂಜ್ಞೀ ಪಂಚೇಂದ್ರಿಯಗಳನ್ನು ಹೊಂದಿದ ಜೀವಿಗಳು.
11. ಆಯತವರ್ಮನ ರತ್ನಕರಂಡಕ
12. ಸಿದ್ಧಿ ತಪಶ್ಚರ್ಯಗಳಿಂದ ಯೋಗಿಗಳಿಗೆ ಲಭಿಸುವ ಶಕ್ತಿ.
13. ಲೋಕಮೂಢತೆ = ನಿರರ್ಥಕವಾಗಿ ತೀರ್ಥಸ್ನಾನ ಮಾಡುವುದು, ಅಗ್ನಿಪ್ರವೇಶ ಮರಣ, ಸ್ವಹಸ್ತಮರಣ, ಗೃಹೋಪಕರಣ,
    ಆರಂಭೋಪಕರಣಗಳಿಗೆ ನಮಸ್ಕರಿಸುವುದು.
    ದೇವಮೂಢತೆ = ಕೇವಲ ಜ್ಞಾನ ಶುದ್ಧಾತ್ಮನನ್ನು ದೇವನೆಂದು ನಂಬದಿರುವುದು.
    ಪಾಖಂಡಿಮೂಢತೆ= ಸ್ವಶುದ್ಧಾತ್ಮ ಭಾವನೆಯಿಂದ ಹುಟ್ಟಿದ ಸಕಲ ವಿಮಲ ಕೇವಲ ಜ್ಞಾನವನ್ನು ಸಮಯ ಎನ್ನುವರು. ಇಂತಹ ಜ್ಞಾನವನ್ನು
    ಅರಿಯದೇ ಇರುವುದು ಪಾಖಂಡಿ ಮೂಢತ್ವ.
14. ನಿರ್ವಿಚಿಕಿತ್ಸೆ = ಅರ್ಹಂತರು ಹೇಳುವ ಉಪದೇಶಗಳು ಕಷ್ಟವೆಂದು ತಿಳಿಯದೇ ಪಾಲಿಸುವುದು.
15. ಉಪಗೂಹನ = ಅಜ್ಞಾನಿ ಮತ್ತು ಅಸಮರ್ಥ ಜನರಿಂದ ಪವಿತ್ರವಾದ ಧರ್ಮದ ಮೇಲೆ ಒದಗಿಬರುವ ನಿಂದೆಯನ್ನು ದೂರಮಾಡುವುದು.
16. ಹದಿನೆಂಟು ದೋಷಗಳು = ಕ್ಷುತ್, ತೃಷೆ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಜರೆ, ರೋಗ, ಮೃತ್ಯು, ಖೇದ, ಸ್ವೇದ, ಮದ, ಅರತಿ,
    ವಿಸ್ಮಯ, ನಿದ್ರೆ, ವಿಷಾದ.
17. ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು : ವೈ. ಸಿ. ಭಾನುಮತಿ
18. ಇಂದ್ರಿಯ ಮತ್ತು ಮನಸ್ಸಿನ ನಿಮಿತ್ತದಿಂದ ಶಬ್ದ, ರಸ, ಸ್ಪರ್ಶ, ರೂಪ, ಗಂಧಾದಿ ವಿಷಯಗಳಲ್ಲಿ ಅವಗ್ರಹ, ಈಹಾ, ಅವಾಯ ಮತ್ತು ಧಾರಣ
    ರೂಪದ ಜ್ಞಾನವೇ ಮತಿಜ್ಞಾನ. (ಜೈಪಾಪವಿಕೋ ಪು. 242)
19. ಮತಿಜ್ಞಾನದಿಂದ ತಿಳಿದಿರುವ ಪದಾರ್ಥದ ಅವಲಂಬನೆಯಿಂದ ಆ ಸಂಬಂಧಿ ಬೇರೆ ಪದಾರ್ಥದ ಜ್ಞಾನ ಉಂಟಾಗುವುದು ಶ್ರುತಜ್ಞಾನ.
20. ಕ್ಷೇತ್ರ, ದ್ರವ್ಯ, ಭಾವದ ಅಪೇಕ್ಷೆಯಿಂದ ಅವಧಿಯಿಂದ ಕೂಡಿದ ಪದಾರ್ಥಗಳನ್ನು ಅರಿಯುವುದು. ಇದರಲ್ಲಿ ಮೂರು ವಿಧ: ದೇಶಾವಧಿ,
    ಪರಮಾವಧಿ, ಸರ್ವಾವಧಿ.
21. ಅನ್ಯರ ಮನಸ್ಸಿನಲ್ಲಿರುವುದನ್ನು ತಿಳಿದುಕೊಳ್ಳುವ ಜ್ಞಾನ.
22. ಸರ್ವಜ್ಞತ್ವ, ಲೋಕಾಲೋಕಗಳಲ್ಲಿಯ ತ್ರಿಕಾಲಗಳಲ್ಲಿಯ ಸರ್ವವಸ್ತುಗಳನ್ನು ಅರಿಯವ ಪರಮ ಜ್ಞಾನ.
23. ದೇವ, ಮನುಷ್ಯ, ತಿರ್ಯಕ್, ನಾರಕ ಎಂಬ ನಾಲ್ಕು ವಿಧದ ಗತಿಗಳು.
24. ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ.
25. ದಶದಿಕ್ಕುಗಳಲ್ಲಿ ಒಂದು ಗುರುತನ್ನು ಮಾಡಿ ಆ ಗುರುತನ್ನು ದಾಟಿ ಆ ಕಡೆಗೆ ಹೋಗದಿರುವುದು.
26. ಪಾಪಕ್ಕೆ ಕಾರಣವಾಗುವುದಿಲ್ಲ ಎಂದು ಪ್ರತಿಜ್ಞೆಗೈಯ್ಯುವುದು.
27. ಸಮತಾ ಸ್ವಭಾವಿಯಾದ ಆತ್ಮನಲ್ಲಿ ನಿರತವಾಗುವುದು.
28. ಉಪವಾಸದ ಹಿಂದಿನ ಮತ್ತು ಮುಂದಿನ ದಿನ ಒಂದು ಹೊತ್ತು ಮಾತ್ರ ಆಹಾರ ಸ್ವೀಕರಿಸುವುದು.
29. ಶರೀರದ ಪೀಡೆಯ ಸಂದರ್ಭದಲ್ಲಿ ಅದರ ನಿವಾರಣೆಗೆ ಮಾಡುವ ಕ್ರಿಯೆ.
30. ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು : ವೈ. ಸಿ. ಭಾನುಮತಿ
31. ಜೈನ ಪಾರಿಭಾಷಿಕ ಪದವಿವರ ಕೋಶ (ಪು. ಸಂ. 319) : ಡಾ. ಸರಸ್ವತಿ ವಿಜಯಕುಮಾರ್ & ಬಾ. ವೇ. ಶ್ರೀಧರ.